# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ. 99-2014** **ಪಿ . ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವಪ್ಪ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 02-09-2021. |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ**

ನನ್ನ ತಾತನ ಹೆಸರು ಕಾಳಿಂಗಪ್ಪ. ನಮ್ಮ ತಾತ ಅವರ ತಂದೆ ಹೆಸರು ನಿಂಗಪ್ಪ. ಪ್ರತಿವಾದಿಯನ್ನು ನಾನು ದೇವಣ್ಣ ಎಂದು ಕರೆಯುತ್ತಿದ್ದೆ. ಆದರೆ ಅವರು ನನ್ನ ಸಂಬಂಧಿಕರಲ್ಲ. ನನ್ನ ತಾತನ ತಂದೆಗೆ ಅಂದರೆ ನಿಂಗಪ್ಪನಿಗೆ ಇಬ್ಬರು ಮಕ್ಕಳು ಎಂದರೆ ಸರಿ, ಅವರ ಹೆಸರು ಚಿಕ್ಕದೇವಪ್ಪ ಮತ್ತು ಕಾಳಿಂಗಪ್ಪ. ನನ್ನ ತಾತ ಕಾಳಿಂಗಪ್ಪನಿಗೆ ಚೆನ್ನಪ್ಪ, ಮಾದಪ್ಪ ಉರುಫ್ ಮೂಗಪ್ಪ ಮತ್ತು ಮಹದೇವಮ್ಮ ಎಂಬ 3 ಜನ ಮಕ್ಕಳು. ಚಿಕ್ಕದೇವಪ್ಪನಿಗೆ ಜವನಪ್ಪ ಎಂಬ ಒಬ್ಬನೇ ಮಗ ಇದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಮಾದಪ್ಪ ಹಾಗು ಲಿಂಗಪ್ಪ ಎಂಬುವ ಇಬ್ಬರು ಮಕ್ಕಳು ಇದ್ದರು, ಅವರಿಬ್ಬರು ಈಗ ಮೃತಪಟ್ಟಿರುತ್ತಾರೆ, ಅವರ ಮಕ್ಕಳು ಇದ್ದಾರೆ, ಅವರುಗಳ ಹೆಸರು ನಿಂಗಣ್ಣ, ಚಿನ್ನಸ್ವಾಮಿ ಎಂದು ಎಂದು ಸ್ವತಃ ನುಡಿಯುತ್ತಾರೆ. ಚಿಕ್ಕದೇವಪ್ಪನಿಗೆ ಜವನಪ್ಪ ಎಂಬ ಒಬ್ಬನೇ ಮಗನಿದ್ದು ಸದರಿ ಜವನಪ್ಪನ ಒಬ್ಬನೇ ಮಗ ಪ್ರತಿವಾದಿ ಆಗಿದ್ದು ನಾನು ಮೇಲೆ ಸದರಿ ಚಿಕ್ಕದೇವಪ್ಪನಿಗೆ ಇಬ್ಬರು ಮಕ್ಕಳು ಇದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ದೂಡ್ಡಪ್ಪನ ಹೆಸರು ಚೆನ್ನಪ್ಪ ಎಂದರೆ ಸರಿ. ಅವರಿಗೆ 1 ನೇ ಹಾಗೂ 2 ನೇ ವಾದಿ ಮತ್ತು ಸುಂದ್ರಮ್ಮ, ಗೌರಮ್ಮ ಎಂಬುವ ಮಕ್ಕಳು ಇದ್ದಾರೆ. ನನ್ನ ತಂದೆಗೆ ನಾನು ಹಾಗೂ ಗೌರಮ್ಮ ಎಂಬುವ ಇಬ್ಬರು ಮಕ್ಕಳು. ನನ್ನ ಸಹೋದರಿ ಹಾಗೂ 1 ಮತ್ತು 2 ನೇ ವಾದಿ ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಮುತ್ತಾತ, ತಾತ, ಚಿಕ್ಕದೇವಪ್ಪ ಸ್ವಾತಂತ್ರ್ಯ ಪೂರ್ವದಲ್ಲೇ ಮರಣ

ಹೊಂದಿದರು ಎಂದರೆ ಸರಿ. ನನ್ನ ತಾತ ಕಾಳಿಂಗಪ್ಪ ಮತ್ತು ಆತನ ಸಹೋದರ ಚಿಕ್ಕದೇವಪ್ಪ ನಡುವೆ ಅವರ ಜೀವಿತ ಕಾಲದಲ್ಲಿ ಏನು ವ್ಯವಹಾರ ಆಗಿದೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಮತ್ತು ಪ್ರತಿವಾದಿ ತಂದೆ ಜವನಪ್ಪ ಸುಮಾರು 50 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಮೃತಪಟ್ಟ ನಂತರ ನನ್ನ ತಂದೆ, ನನ್ನ ದೊಡ್ಡಪ್ಪ ಹಾಗೂ ನನ್ನ ಸೋದರ ಅತ್ತೆ ನಡುವೆ ಆಸ್ತಿ ವಿಭಾಗ ಎಂದರೆ ಸರಿ. ಸಾಕ್ಷಿ ಮುಂದುವರಿದ ನನ್ನ ಸೋದರ ಅತ್ತೆಗೆ ಅರಿಶಿನ ಕುಂಕುಮಕ್ಕೆಂದು ನೀಡಿದ್ದೇವೆ. ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದು ನನ್ನ ದೊಡ್ಡಪ್ಪ, ನನ್ನ ತಂದೆ ಹಾಗೂ ನನ್ನ ಅತ್ತೆಗೆ ಅವರ ಜೀವಿತ ಕಾಲದಲ್ಲಿ ಅವರಿಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದಂತೆ ಬಾಯಿ ಮಾತಿನ ವಿಭಾಗ ಆದ ನಂತರ ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ನನ್ನ ತಂದೆ, ನನ್ನ ದೊಡ್ಡಪ್ಪ ಹಾಗೂ ನನ್ನ ಅತ್ತೆ ಸ್ವಾಧೀನ ಮತ್ತು ಅನುಭವದಲ್ಲಿ ಇದ್ದರು ಎಂದರೆ ಸರಿ. ಈ ದಾವೆಯನ್ನು ನಾನು ದಾವಾ ಸರ್ವೇ ನಂಬರ್ ನ 6 ಎಕರೆ ಜಮೀನಿಗೆ ಸಲ್ಲಿಸಿದ್ದೇನೆ. ದಾವಾ ಸರ್ವೇ ನಂಬರ್ 2 1965 ರ ಪೂರ್ವದಲ್ಲೇ 2/1 ಮತ್ತು 2/2 ಎಂದು ಪೋಡು ಆಗಿದೆ ಎಂದರೆ ನನಗೆ ಗೊತ್ತಿಲ್ಲ.

3. ದಾವಾ ಸ್ವತ್ತಿನಲ್ಲಿ ಬೀರ್ವಾಲ್ ನಾಲೆ(ನುಗು ಜಲಾಷಯ) ಹೋಗಿದೆ ಎಂದರೆ ಸರಿ. ಸರ್ವೆ ನಂ.2 ರ ಮಧ್ಯಭಾದಗಲ್ಲಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಬೀರ್ವಾಲ್ ನಾಲೆ ಹೋಗಿದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ಬೀರ್ವಾಲ್ ನಾಲೆ ಹೋಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಬೀರ್ವಾಲ್ ನಾಲೆಗೆ ಭೂ ಸ್ವಾಧೀನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಚೆನ್ನಪ್ಪ ಭೂ ಪರಿಹಾರದವರಿಂದ ಪರಿಹಾರವನ್ನು ಪಡೆದುಕೊಂಡಿದ್ದಾರೆ ಎಂರದೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯ ತಂದೆ ಜವನಯ್ಯ ಕೂಡ ಭೂ ಪರಿಹಾರದವರಿಂದ ಪರಿಹಾರವನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿ ನಮಗೆ ಸಂಬಂಧಿಕರಲ್ಲ ಅವರ ಯಾರು ಎಂದು ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ನನ್ನ ವಯಸ್ಸು 54 ವರ್ಷ ನನಗೆ ಬುದ್ದಿ ಬಂದಾಗಿನಿಂದಲೂ ಸರ್ವೇ ನಂ.2 ರಲ್ಲಿ ನಾಲೆ ಇರುವುದು ನನಗೆ ಗೊತ್ತಿದೆ ಎಂದರೆ ಸರಿ. ದಾವಾ ಸ್ವತ್ತನ್ನು ನಾವು ಇಲ್ಲಿಯವರಗೊ ಅಳತೆ ಮಾಡಿಸಿಲ್ಲ, ಹದ್ದುಬಸ್ತು ಕಲ್ಲು ನಡೆಸಿಲ್ಲ ಎಂದರೆ ಸರಿ. ನನ್ನ ಅತ್ತಗೆ ಆಸ್ತಿಗಳನ್ನು ವಿಭಾಗ ಮಾಡಿ ನೀಡಿದ್ದರು ಬಗ್ಗೆ ಹಾಗೂ ಆಕೆಗೆ ಅರಿಶಿನ ಕುಂಕುಮಕ್ಕೆಂದು ಇಷ್ಟು ಎಕರೆ ಜಮೀನು ಎಂದು ಹೇಳಿ ಅಳತೆ ಮಾಡಿಸಿ ಹದ್ದುಬಸ್ತು ಕಲ್ಲು ಹಾಕಿಸಿದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅತ್ತೆ ಸರ್ವೆ

ನಂ.2/2 ರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂ.2/2 ರ ಪೂರ್ವಕ್ಕೆ ಸರ್ವೆ ನಂ.2/1 ಜಮೀನು ಇದ್ದು ಅದರಲ್ಲಿ ಕಾಳಮ್ಮನ ಮಕ್ಕಳು ಸ್ವಾಧೀನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ ನಾನೆ ಸ್ವಾಧೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ.

4. ನನ್ನ ಅತ್ತೆ ಮಹದೇಮ್ಮ ಪ್ರತಿವಾದಿ ವಿರುದ್ಧ ಓ.ಎಸ್. 56/2014 ರಂತೆ 1 ನೇ ಅಧಿಕ ಸಿವಿಲ್ ನ್ಯಾಯಾಲಯ, ನಂಜನಗೂಡು ಇಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ. ಆ ದಾವೆಯ ವಿಚಾರಣೆ ಕಾಲದಲ್ಲಿ ನಾನೂ ಸಹ ನ್ಯಾಯಾಲಯಕ್ಕೆ ಹಾಜರಾಗಿ ವಿಚಾರಣೆ ವೇಳೆ ನಾನು ನ್ಯಾಯಾಲಯದಲ್ಲಿ ಇದ್ದೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ಅತ್ತೆ ಎಷ್ಟು ವಿಸ್ತೀರ್ಣಕ್ಕೆ ದಾವೆ ಹಾಕಿದ್ದಾಳೆ, ಆ ದಾವೆಯ ದಾವಾ ಸ್ವತ್ತಿನ ಚೆಕ್ಕುಬಂದಿ ಎಲ್ಲಾ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿ ತಾಯಿ ಹೆಸರು ಕಾಳಮ್ಮ ಹಾಗೂ ತಂದೆ ಹೆಸರು ಜವನಯ್ಯ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಅತ್ತೆ ಆ ದಾವೆಯ ದಾವಾ ಸ್ವತ್ತಿನ ಪೂರ್ವಕ್ಕೆ ಈ ದಾವೆಯ ಪ್ರತಿವಾದಿ ಇದ್ದು ಅಳತೆ ಕಲ್ಲುಗಳನ್ನು ಪ್ರತಿವಾದಿ ಕಿತ್ತುಹಾಕಿದ್ದರು ಎಂದು ತಿಳಿಸಿ ದಾವೆ ಹೂಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅತ್ತೆಯ ಜಮೀನಿನ ದಕ್ಷಿಣ ಭಾಗದಲ್ಲಿ ನುಗುಕಾಲುವೆ ಇದ್ದು ಅದಾದ ನಂತರ ಉಳಿಕೆ 2/2 ಜಮೀನು ಇದ್ದು ಸದರಿ 2/2 ರಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಅರಿಶಿನ ಕುಂಕುಮಕ್ಕೆಂದು ನೀಡಿದ ಜಮೀನ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನನ್ನ ಅತ್ತೆಗೆ ಅರಿಶಿನ ಕುಂಕುಮಕ್ಕೆಂದು ನೀಡಿದ ಜಮೀನ ದಾಖಲೆಯಲ್ಲಿ ಸದರಿ ಜಮೀನ ಪೂರ್ವಕ್ಕೆ ಕಾಳಮ್ಮನ ಮಕ್ಕಳ ಜಮೀನು ಹಾಗೂ ದಕ್ಷಿಣಕ್ಕೆ ನುಗು ಜಾಲಷಯ ಇದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ತಿಳಿಸಿದ್ದರು ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5.ದಾವಾ ಸ್ವತ್ತಿನ ಖಾತೆ ನನ್ನ ತಂದೆ ಹೆಸರಿನಲ್ಲಾಗಲಿ, ನನ್ನ ತಾತನ ಹೆಸರಿನಲ್ಲಾಗಲಿ ಇದಿದ್ದು ನಾನು ನೋಡಿಲ್ಲ ಎಂದರೆ ಸರಿ. ಇನ್ನೂಳಿದ ಇಬ್ಬರ ವಾದಿಗಳ ಪರವಾಗಿ ಸಹ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆ ಹೂಡಿದ ನಂತರ 1 ಹಾಗೂ 2 ನೇ ಪ್ರತಿವಾದಿಗೆ ದಾವಾ ಸ್ವತ್ತು ತಮಗೆ ಸೇರಿದ್ದಲ್ಲ ಎಂದು ಮನವರಿಕೆ ಆಗಿದ್ದು, ಆದ್ದರಿಂದ ಅವರು ಈ ದಾವೆಯಲ್ಲಿ ಹಾಜರಾಗಿ ಸಾಕ್ಷ್ಯ ಹೇಳಲು ಬಂದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.2/1 ರ ಖಾತೆ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಪ್ರತಿವಾದಿ ನಮಗೆ ಗೊತ್ತಿಲ್ಲದ ಹಾಗೆ ಫೋರ್ಜರಿ ಮಾಡಿ ಪೌವತಿ ಖಾತೆ ಮಾಡಿಸಿಕೊಂಡಿರುತ್ತಾರೆ ಅದು ತಿಳಿದ ನಂತರ ನಾವು ಈ ದಾವೆಯನ್ನು ಹೂಡಿದ್ದೇವೆ ಎಂದು

ನುಡಿಯುತ್ತಾರೆ. ಸರ್ವೆನಂ.2/1 1 ಎಕರೆ 18 ಗುಂಟೆ ಜಮೀನು ಪ್ರತಿವಾದಿ ತಂದೆ ಜವನಯ್ಯನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ಮೃತಪಟ್ಟ ನಂತರ ಅವರ ಒಬ್ಬರೇ ಮಗನಾದ ಪ್ರತಿವಾದಿ 1983-84 ರಲ್ಲಿ ಅವರ ಹೆಸರಿಗೆ ಪೌತಿವಾರಸು ಖಾತೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ತೋರಿಸಿರುವ 1 ಎಕರೆ 4 ಗುಂಟೆ ಜಮೀನಿನಲ್ಲಿ ನನ್ನ ದೊಡ್ಡಪ್ಪನ ಮಕ್ಕಳಾದ ವಾದಿ-1 ಮತ್ತು 2 ಹಾಗೂ ನಾನು ತಲಾ ಅರ್ಧದಂತೆ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು 2/1 ರ ಪೂರ್ತಾ ಸ್ವಾಧೀನದಲ್ಲಿ ನಾವೇ ಇದ್ದೀವಿ ಎಂದು ನುಡಿಯುತ್ತಾರೆ. ಸರ್ವೇ ನಂ.2/1 ರಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

6. ಸರ್ವೇ ನಂ.2/1 ರಲ್ಲಿ ಬೋರ್ವೆಲ್ ಕೊರಸಲು ಪ್ರತಿವಾದಿ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 1987 ನೇ ಸಾಲಿನಲ್ಲೇ ಪ್ರತಿವಾದಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.2/1 ಪ್ರತಿವಾದಿ ತಂದೆ ಜವನಯ್ಯನ ಹೆಸರನಲ್ಲಿ ಖಾತೆ ಆಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ಹೆಸರಿಗೆ ಸರ್ವೇ ನಂ.2/1 ರಲ್ಲಿ ಖಾತೆ ಆಗಿದ್ದ ವಿಚಾರ ನನ್ನ ತಂದೆ, ನನ್ನ ದೊಡ್ಡಪ್ಪ ಚೆನ್ನಪ್ಪ ಹಾಗೂ ನನ್ನ ಅತ್ತೆ ಮಹದೇವಮ್ಮನಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈಗ್ಗೆ 6-7 ವರ್ಷದ ಹಿಂದೆ ನಾನು ಸದರಿ ಜಮೀನಿನ ಖಾತೆ ಮಾಡಿಸಿಲು ಹುಲ್ಲಹಳ್ಳಿ ನಾಡ ಕಚೇರಿಗೆ ಹೋದಾಗ, ಪ್ರತಿವಾದಿ ಸರ್ವೇ ನಂ.2/1 ನ್ನು ಖಾತೆ ಮಾಡಿಸಿಕೊಂಡಿರುವ ವಿಷಯ ನನಗೆ ಗೊತ್ತಾಯಿತು. ಯಾವ ದಿನಾಂಕ, ತಿಂಗಳು, ವರ್ಷದಲ್ಲಿ ಗೊತ್ತಾಯಿತು ಎಂದು ನನಗೆ ನೆನಪಿಲ್ಲ.

7. ದಾವಾ ಸ್ವತ್ತಿಗೆ ಕಂದಾಯವನ್ನು ಪಾವತಿ ಮಾಡಿದ್ದೇನೆ, ಸದರಿ ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನಿಪಿ-6 ರಲ್ಲಿ ಸರ್ವೇ ನಂ.2/2 ವಿಸ್ತೀರ್ಣ 1 ಎಕರೆ 9 ಗುಂಟೆಗೆ ಮಾತ್ರ ಕಂದಾಯ ಪಾವತಿ ಮಾಡಿದ ಬಗ್ಗೆ ನಮೂದು ಆಗಿದೆ ಎಂದರೆ ಸರಿಯಲ್ಲ. ನಿಪಿ-5 ರಿಂದ 7 ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ. ನಿಪಿ-13 ರಿಂದ 21 ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ.ನಿಪಿ-11 ನ್ನು ನಾನು ಹುಲ್ಲಹಳ್ಳಿಯ ನಾಡಕಚೇರಿಯಿಂದ ಪಡೆದುಕೊಂಡಿರುತ್ತೇನೆ. ನಿಪಿ-12 ನ್ನು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಸದರಿ ಆದೇಶದಂತೆ ಪಡೆದುಕೊಂಡಿರುತ್ತೇನೆ. ಈ ದಾವೆಗೆಂದು ನಾನು ನಿಪಿ-11

ಮತ್ತು 12 ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–11 ಮತ್ತು 12 ನ್ನು ಈ ದಾವೆ ಸಲ್ಲಿಸುವ ಉದ್ದೇಶದಿಂದಲೇ ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**